ಈ. ಇದಕ್ಕಾಗಿ ನೀಡಿರುವ ಹಣವೆಷ್ಟು; ಯಾವ ಯಾವ ಜಿಲ್ಲೆಯಲ್ಲಿ ಪರಿಹಾರ ನೀಡುವಲ್ಲಿ ವಿಳಂಬ:ಗೊಂದಲಗಳು ಉಂಟಾಗಿರುತ್ತದೆ;

ಉ. ಬೆಳೆ ವಿಮೆ ಪರಿಹಾರಕ್ಕೆ ಅನುಸರಿಸುವ ಮಾನದಂಡಗಳೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ. ಇಲ್ಲ.

ಆ. 2001-2002ನೇ ಸಾಲಿನಲ್ಲಿ ಬೆಳೆ ಸಾಲ ಪಡೆದ 6,86,360 ರೈತರು ಹಾಗೂ ಬೆಳೆ ಸಾಲ ಪಡೆಯದ 3,58,631 ರೈತರು ಬೆಳೆ ವಿಮಾ ಯೋಜನೆಗೆ ಒಳಪಟ್ಟಿರುತ್ತಾರೆ.

ಇ. ಹೌದು.

2001-2002ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಬೇಸಿಗೆ ಹಂಗಾಮಿನಲ್ಲಿ ಒಟ್ಟು ರೂ. 137.00 ಕೋಟಿ ರೂಪಾಯಿಗಳ ಬೆಳೆ ನಷ್ಟ ಪರಿಹಾರವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಈ. ಬೆಳೆ ವಿಮಾ ಪರಿಹಾರವಾಗಿ 2000-2001 ಹಾಗೂ 2001-2002ನೇ ಸಾಲಿನ ಒಟ್ಟು ರೂ. 137.00 ಕೋಟಿಗಳನ್ನು ನೀಡಲಾಗಿದೆ. ಪರಿಹಾರ ನೀಡುವಲ್ಲಿ ಯಾವ ಜಿಲ್ಲೆಯಲ್ಲೂ ವಿಳಂಬ: ಗೊಂದಲಗಳುಂಟಾಗಿಲ್ಲ. ಆದಾಗ್ಯೂ ಕೆಲವು ಜಿಲ್ಲೆಗಳಲ್ಲಿ ಬೆಳೆ ವಿಮೆಗೆ ಒಳಗೊಂಡ ಕ್ಷೇತ್ರದಲ್ಲಿ ವ್ಯತ್ಯಾಸವಿದ್ದುದರಿಂದ, ಅವುಗಳನ್ನು ಸರಿಪಡಿಸಲು ಎಲ್ಲಾ ಕ್ರಮಗಳನ್ನು ಕೈಗೊಂಡಿರುತ್ತದೆ.

ಉ. ಬೆಳೆ ವಿಮಾ ಪರಿಹಾರಕ್ಕೆ ಅನುಸರಿಸುವ ಮಾನದಂಡ ಇಳುವರಿ ಕೊರತೆಯ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

ಅಂಗನವಾಡಿ ಶಿಕ್ಷಕಿಯರ ಗೌರವಧನ

1891(2289): ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಅಂಗನವಾಡಿ ಶಿಕ್ಷಕಿಯರಿಗೆ ಹಾಗೂ ಸಹಾಯಕಿಯರಿಗೆ ಗೌರವಧನ ಹೆಚ್ಚಿಸಲು ಕೈಗೊಂಡ ಕ್ರಮಗಳೇನು? ಎಷ್ಟು ಹೆಚ್ಚಳವಾಗುವುದು? ಅವರ ಸೇವೆಯನ್ನು ಯಾವಾಗ ಖಾಯಂಗೊಳಿಸಲಾಗುವುದು?

ಆ. ಇದರಲ್ಲಿ ರಾಜ್ಯದ ಹಾಗೂ ಕೇಂದ್ರದ ಪಾಲೆಷ್ಟು?

ಇ. ಸರ್ಕಾರದ ಯಾವ ಯೋಜನೆಗಳ ಅನುಷ್ಠಾನಕ್ಕೆ ಅವರ ಸೇವೆಯನ್ನು ಪಡೆಯಲಾಗಿದೆ.

ಶ್ರೀಮತಿ ಮೋಟಮ್ಮ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ. ಐಸಿಡಿಎಸ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಕೇಂದ್ರ ಸರ್ಕಾರವು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡುವ ಅನುದಾನದಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಗೌರವಧನ ಭರಿಸುತ್ತಿದ್ದು, ಗೌರವಧನ ಹೆಚ್ಚಳ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರವೇ ಕೈಗೊಳ್ಳಬೇಕಾಗಿರುತ್ತದೆ. ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ತನ್ನ ಆಯವ್ಯಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 250/- ಮತ್ತು ಸಹಾಯಕಿಗೆ ರೂ. 125/- ಹೆಚ್ಚುವರಿ ಗೌರವಧನವನ್ನು ನೀಡುತ್ತಿದೆ.

ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆ ಕೇಂದ್ರ ಸರ್ಕಾರ ಪರಿಶೀಲನೆಯಲ್ಲಿರುತ್ತದೆ. ಸಧ್ಯಕ್ಕೆ ಗೌರವಧನದಲ್ಲಿ ಯಾವುದೇ ಹೆಚ್ಚಳವಿರುವುದಿಲ್ಲ. ಅಂಗನವಾಡಿ ಕಾರ್ಯಕರ್ತೆಯರು ಗೌರವ, ಕಾರ್ಯಕರ್ತೆಯರಾಗಿದ್ದು ಇವರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಮುಂದಿರುವುದಿಲ್ಲ.

ಆ. ಕೇಂದ್ರ ಸರ್ಕಾರ ನೀಡುತ್ತಿರುವ ಗೌರವಧನ, ರಾಜ್ಯ ಸರ್ಕಾರ ನೀಡುತ್ತಿರುವ ಹೆಚ್ಚುವರಿ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ. ಮುಖ್ಯವಾಗಿ ಐಸಿಡಿಎಸ್ ಯೋಜನೆಯನ್ನು ಅಂಗನವಾಡಿ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸಲು ಹಾಗೂ ಇತ್ತೀಚೆಗೆ ಹೊಸದಾಗಿ ಬಂದಿರುವ ಸ್ತ್ರೀಶಕ್ತಿ ಯೋಜನೆ ಮತ್ತು ಆರೋಗ್ಯ ಇಲಾಖೆಯ ಆರ್.ಸಿ.ಹೆಚ್ ಕಾರ್ಯಕ್ರಮಗಳಲ್ಲಿ ಇವರ ಸೇವೆಯನ್ನು ಪಡೆಯಲಾಗುತ್ತಿದೆ.

Annexure

Monthly honorarium paid by Central and State Government to AWWS & AWH's

Sl	Particulars of qualification	Central Government	State Government
1.	SSLC fail	438	250
2.	SSLC fail with 5 years experience	469	250
3.	SSLC fail with 10 years experience	500	250
4.	SSLC pass	500	250
5.	SSLC pass with 5 year experience	531	250
6.	SSLC pass with 10 years experience	565	250
7.	Anganwadi Helpers	260	125

ಸ್ವಸಹಾಯ ಗುಂಪುಗಳ ವಿವರ

1892(2290): ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಜಿಲ್ಲಾವಾರು ರಚಿತಗೊಂಡಿರುವ ಸ್ವಸಹಾಯ ಗುಂಪುಗಳ ಸಂಖ್ಯೆ ಎಷ್ಟು?

ಆ. ನಗರದಲ್ಲಿ ಸ್ವಸಹಾಯ ಗುಂಪುಗಳನ್ನು ನಿರ್ಮಿಸಲು ಕೈಗೊಂಡ ಕ್ರಮಗಳನ್ನು ತಿಳಿಸುವುದು.

ಇ. ಆ ಸ್ವಸಹಾಯ ಗುಂಪುಗಳ ರಚನೆಗೆ ಎಷ್ಟು ಸೇವಾ ಸಂಸ್ಥೆಗಳು ಕಾರ್ಯನಿರತವಾಗಿವೆ. ಅವುಗಳ ಅಧಿಕಾರ ವ್ಯಾಪ್ತಿಗಳೇನು?